ಆದರೂ ಇಂತಹ ವ್ಯವಹಾರಗಳಿಗೆ ರಾತ್ರಿಯೇ ಸೂಕ್ತ. ಅಲ್ಲದೆ ಚಾಮುಂಡಿ ಮನೆಗೆ ಬರಿಗೈಯಲ್ಲಿ ಹೋಗಬಾರದು. ನಂಜುಂಡ ತನ್ನ ಮನೆಗೆ ಬಂದ.

ದುಡ್ಡನ್ನು ತಕ್ಕಂಡು, ಸೊಂಟಕ್ಕೆ ಬಿಕ್ಕಂಡು
ಅಸುಗಲ್ಲಿನ ಮೇಲೆ ಒರಟಾರು। ನಂಜುಂಡ
ಚಾಮುಂಡಿ ಮನೆ ಕಡೆ ನಡೆದಾರು

ತನ್ನಲ್ಲಿ ಒಂದು ಮಾತು ಹೇಳದೆ ಎಲ್ಲಿಗೋ ಹೊರಟ ನಂಜುಂಡನನ್ನು ದೇವೀರಿ ಸಂಶಯದಿಂದ ಪ್ರಶ್ನಿಸುತ್ತಾಳೆ.

ದುಡ್ಡನ್ನು ತಕ್ಕೊಂಡು, ಸೊಂಟಕ್ಕೆ ಬಿಕ್ಕಂಡು
ನೀವೆಲ್ಲಿಗೆ ರಾಯ ಒರಟೀರಿ। ಒಂದು ಮಾತ
ಹೇಳದೆ ಇಂಗ್ಯಾಕ ನಡದೀರಿ?

ನಂಜುಂಡ ಒಂದು ಹಸಿ ಸುಳ್ಳು ಬಿಟ್ಟ.

ಮೂರು ತಿಂಗಳ ನ್ಯಾಯ, ಆರು ತಿಂಗಳ ನ್ಯಾಯ
ಕುಲದೋರ ನ್ಯಾಯ ಬಲು ನ್ಯಾಯ। ದೇವೀರಿ
ನ್ಯಾಯ ತೀರಿಸಿ ಬರತೀನಿ

ದೇವೀರಿ ಒಂದು ಪಟ್ಟು ಹಾಕುತ್ತಾಳೆ.

ಮದುವೆ ಆಗೋತಕ್ಕ ನಾ ನ್ಯಾಯ ನೋಡಿಲ್ಲ
ಮದುವೀಯಾದ ಮೇಲೂ ನೋಡಿಲ್ಲ। ನಂಜುಂಡ
ನಿಮ ಸಂಗ ನಾನು ಬರುವಾಕಿ

ದೇವೀರಿ ಬಂದರೆ ಚಾಮುಂಡಿ ಮನೆಗೆ ಹೋಗುವುದು ಹೇಗೆ?

ರಾಯನ ಕೂಡ ರಾಣೀ ನೀ ಬಂದಾರ
ದೇವರು ಸಭೆಯಲ್ಲ ನಗುತಾರ। ದೇವೀರಿ
ನನ ಕೂಡ ನೀನು ಬರಬ್ಯಾಡ

ದೇವೀರಿ ಸಂಶಯ ಬಲವಾಯಿತು.
ರಾಯನ ಕೂಡ ರಾಣಿ ನಾ ಬಂದಾರ
ದೇವರು ಸಭೆ ಯಾಕ ನಗುತಾರ। ನನ ರಾಯ
ನಿನ ಕೂಡ ನಾನು ಬರತೀನಿ